ಕರ್ನಾಟಕ Government ಸರ್ಕಾರ of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3rd STAGE BENGALURU - 085
Email: dsert.kar@nic.in Website : http://dsert.kar.nic.in
Phone : 080 26422172 26422173 26422174 Fax 26422177

ಸಂಖ್ಯೆ: ಡಿ.ಎಸ್.ಇ.ಆರ್.ಟಿ./ಇ.ಇ.ಸಿ.-3/ವಿ.ವಿ./01/2020-21

ದಿನಾಂಕ:01-09-2010

## ಸುತ್ತೋಲೆ

ವಿಷಯ: ಪ್ರೌಢಶಾಲಾ ಹಂತದ ವಿಜ್ಞಾನ ಮತ್ತು ಗಣಿತ ವಿಷಯಗಳ ಆಂಗ್ಲ ಮಾಧ್ಯಮದ ಎನ್.ಸಿ.ಇ.ಆರ್.ಟಿ. ವಿಡಿಯೋ ಪಾಠ ಹಾಗೂ ಸಂಪನ್ಮೂಲ ಸಾಮಗ್ರಿಗಳನ್ನು ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳುವ ಬಗ್ಗೆ

*****

ಮೇಲಿನ ವಿಷಯದನ್ವಯ, ಕೋವಿಡ್-19 ಕಾರಣದಿಂದ ಮನೆಯಲ್ಲಿರುವ ಪ್ರೌಢಶಾಲಾ ಹಂತದ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಡಿ.ಎಸ್.ಇ.ಆರ್.ಟಿ. ವತಿಯಿಂದ ವಿಡಿಯೋ ಪಾಠಗಳನ್ನು ಸಿದ್ಧಪಡಿಸಿ, ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರ ಮಾಡಲಾಗುತ್ತಿದೆ. ಪ್ರೌಢಶಾಲಾ ಹಂತದ ಆಂಗ್ಲ ಮಾಧ್ಯಮದ ವಿಜ್ಞಾನ ಹಾಗೂ ಗಣಿತ ವಿಷಯಗಳ ವಿಡಿಯೋ ಪಾಠಗಳನ್ನು ಎನ್.ಸಿ.ಇ.ಆರ್.ಟಿ. ಅಭಿವೃದ್ಧಿಪಡಿಸಿದ್ದು, ಈ ವಿಷಯಗಳ ವಿಡಿಯೋ ಪಾಠಗಳು ಹಾಗೂ ಪಾಠಕ್ಕೆ ಸಂಬಂಧಿಸಿದ ಹೆಚ್ಚುವರಿ ಸಂಪನ್ಮೂಲಗಳ ತರಗತಿವಾರು ಅಧ್ಯಾಯವಾರು ವೆಬ್‌ಲಿಂಕ್‌ಗಳನ್ನು ಈ ಪತ್ರಕ್ಕೆ ಲಗತ್ತಿಸಿದ ಅನುಬಂಧದಲ್ಲಿರುವ ಪತ್ರದಲ್ಲಿ ಅಡಕಗೊಳಿಸಿದೆ. ಸಂಬಂಧಿಸಿದ ತರಗತಿಗಳ ಪೋಷಕರು ಹಾಗೂ ವಿದ್ಯಾರ್ಥಿಗಳ ಉಪಯೋಗಕ್ಕೆ ಈ ಮಾಹಿತಿಯನ್ನು ತಕ್ಷಣಕ್ಕೆ ತರಲು ಆಂಗ್ಲ ಮಾಧ್ಯಮ ತರಗತಿ ನಡೆಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಸಂಬಂಧಿಸಿದ ವಿಷಯಗಳ ಶಿಕ್ಷಕರಿಗೆ ಸೂಚಿಸಿದೆ.

ಈ ವಿಡಿಯೋ ಪಾಠಗಳು ಹಾಗೂ ಹೆಚ್ಚುವರಿ ಸಂಪನ್ಮೂಲ ವಿಡಿಯೋಗಳು ದೀಕ್ಷಾ ಪೋರ್ಟಲ್‌ನಲ್ಲಿ (https://diksha.gov.in/) ಲಭ್ಯ ಇವೆ. ದೀಕ್ಷಾ ಆಪ್ ಸಹ ಇದ್ದು, ಆಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು, ಪಾಠ ಹಾಗೂ ಹೆಚ್ಚುವರಿ ಸಂಪನ್ಮೂಲಗಳನ್ನು ವೀಕ್ಷಿಸಬಹುದಾಗಿದೆ. https://diksha.gov.in/ ಜಾಲತಾಣಕ್ಕೆ ಹೋಗಿ, ಅಲ್ಲಿ ಎನ್.ಸಿ.ಇ.ಆರ್.ಟಿ. ಎಕ್ಸ್‌ಪ್ಲೋರ್ ಬಟನ್ ಕ್ಲಿಕ್ ಮಾಡಿ, ಅಲ್ಲಿರುವ 'ವಿಡಿಯೋ' ಬಟನ್ ಕ್ಲಿಕ್ ಮಾಡಿ, ಅಧ್ಯಾಯವಾರು ವಿಡಿಯೋ ಪಾಠ ಹಾಗೂ ಸಂಪನ್ಮೂಲಗಳನ್ನು ವೀಕ್ಷಿಸಬಹುದಾಗಿದೆ. ಮೊದಲ ಬಾರಿ ಲಾಗಿನ್ ಮಾಡಿದಾಗ Teacher, Student or Other ಎಂಬ ಮೂರು ಬಟನ್‌ಗಳಲ್ಲಿ ಸೂಕ್ತವಾದುದನ್ನು ಆಯ್ಕೆ ಮಾಡಿ, continue ಎಂಬ ಬಟನ್ ಅನ್ನು ಕ್ಲಿಕ್ ಮಾಡುವುದು. ನಂತರ ವಿವರಗಳನ್ನು ದಾಖಲಿಸಿ, submit ಕ್ಲಿಕ್ ಮಾಡುವುದು.

ಈ ಕುರಿತಂತೆ ಹಂತವಾರು ವಿಧಾನದ ಸ್ಕ್ರೀನ್ ಶಾಟ್ ಅನ್ನು ಸುಲಭ ಬಳಕೆಗೆ ನೀಡಿದ್ದು, ಅದನ್ನು ಅವಲೋಕಿಸಿ, ತಮಗೆ ಅವಶ್ಯವಾದ ವಿಡಿಯೋ ಪಾಠ ಹಾಗೂ ಇತರೆ ಸಂಪನ್ಮೂಲಗಳನ್ನು ವೀಕ್ಷಿಸಬಹುದಾಗಿದೆ. ಒಂದು ಅಧ್ಯಾಯಕ್ಕೆ ಸುಮಾರು 8 ರಿಂದ 10 ವಿಡಿಯೋಗಳಲ್ಲಿ ಪಾಠಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಅರ್ಥೈಸಲು ವಿಡಿಯೋಗಳು ಲಭ್ಯವಿರುತ್ತವೆ. ಈ ವಿಡಿಯೋ ಪಾಠಗಳ ಸದುಪಯೋಗ ಪಡೆದುಕೊಳ್ಳಲು ಸಂಬಂಧಿಸಿದ ಶಿಕ್ಷಕರು, ವಿದ್ಯಾರ್ಥಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲು ತಿಳಿಸಿದೆ. ಇದರ ಜೊತೆ ಹತ್ತನೇ ತರಗತಿಯ ಪರೀಕ್ಷಾ ವಾಣಿ ವಿಡಿಯೋಗಳು ದೀಕ್ಷಾ ಪೋರ್ಟಲ್ ಮತ್ತು ಇಲಾಖಾ ಯುಟ್ಯೂಬ್ ಚಾನೆಲ್‌ಗಳಲ್ಲಿ ಲಭ್ಯವಿದ್ದು, ಇದರ ಸದುಪಯೋಗ ಪಡೆಯುವುದು.

02/09

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ



Scanned with CamScanner

ಇವರಿಗೆ : ಅಗತ್ಯ ಕ್ರಮಕ್ಕಾಗಿ.

1) ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ – ಅಗತ್ಯ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ರವರಿಗೆ–ಅಗತ್ಯ ಕ್ರಮಕ್ಕಾಗಿ
3) ರಾಜ್ಯದ ಎಲ್ಲಾ ಬಿ.ಇ.ಓ.ಗಳಿಗೆ–ಅಗತ್ಯ ಕ್ರಮಕ್ಕಾಗಿ – ಡಯಟ್ ಪ್ರಾಂಶುಪಾಲರ ಮೂಲಕ
4) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರಿಗೆ– ಅಗತ್ಯ ಕ್ರಮಕ್ಕಾಗಿ– ಬಿ.ಇ.ಓಗಳ ಮೂಲಕ
5) ರಾಜ್ಯದ ಎಲ್ಲಾ ಪ್ರೌಢಶಾಲೆಗಳ ವಿಜ್ಞಾನ ಮತ್ತು ಗಣಿತ ವಿಷಯಗಳ ಶಿಕ್ಷಕರಿಗೆ– ಅಗತ್ಯ ಕ್ರಮಕ್ಕಾಗಿ–ಶಾಲಾ ಮುಖ್ಯ ಶಿಕ್ಷಕರ ಮೂಲಕ
6) ರಾಜ್ಯದ ಎಲ್ಲಾ ಪ್ರೌಢಶಾಲೆಗಳಲ್ಲಿ ಕಲಿಯುತ್ತಿರುವ ಪೋಷಕರಿಗೆ– ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರ ಮೂಲಕ

ಪ್ರತಿಗಳು : ಮಾಹಿತಿಗಾಗಿ ವಂದನೆಗಳೊಂದಿಗೆ ಸಲ್ಲಿಸಿದೆ:

1) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ–ಮಾನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.
2) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ ರವರಿಗೆ
3) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ
4) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ, ಎಸ್.ಎಸ್.ಎ/ಆರ್.ಎಂ.ಎಸ್.ಎ ರವರಿಗೆ
5) ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ, ಧಾರವಾಡ ರವರಿಗೆ
6) ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ, ಗುಲ್ಬರ್ಗಾ ರವರಿಗೆ
7) ಕಛೇರಿ ಪ್ರತಿ.

Scanned with CamScanner